ಆಮ್ರಪಾಲಿಯನ್ನು ಕಂಡಾಗ ಗೌತಮ ಬುದ್ಧನಿಗೆ ಏನನ್ನಿಸಿರಬಹುದು!

ಇತಿಹಾಸದಲ್ಲಿ ಇನ್ನೆಂದೂ ಉತ್ತರ ಸಿಕ್ಕದಂತೆ ಹುದುಗಿಹೋಗಿರುವ ಇಂಥ ರೋಮಾಂಚಕ ಮುಖಗಳು ಲೋಹಿಯಾಗೆ ಕುತೂಹಲ ಹುಟ್ಟಿಸುತ್ತಿದ್ದವು.

ಕೆ.ಎಸ್. ಭಗವಾನ್ ಕನ್ನಡಿಸಿರುವ ಲೋಹಿಯಾರ 'ಇತಿಹಾಸ ಚಕ್ರ' ಕೃತಿಯ ಭಾಗಗಳು:

'ಗೌತಮ ಬುದ್ಧನಿಗೆ ಆ ಯುಗದ ಶ್ರೇಷ್ಠ ನರ್ತಕಿಯನ್ನು ಪರಿಚಯಿಸಿದಾಗ, ಆಕೆ ತನ್ನ ಸಂಘಕ್ಕೆ ಸೇರಬೇಕೆಂದು ಬುದ್ಧ ಬಯಸಿದಾಗ ಆತನಿಗೆ ಏನನ್ನಿಸಿತು ಎಂದು ತಿಳಿಯಲು ನನಗೆ ಹೆಚ್ಚು ಆಸಕ್ತಿ ಉಂಟು. ಅತ್ಯಂತ ನಿಪುಣೆಯಾದ ಈ ಹೆಣ್ಣು ತನ್ನನ್ನು ಸಂಘಕ್ಕೆ ಸೇರಿಸಿಕೊಳ್ಳಬೇಕೆಂದು ಕೇಳಿಕೊಂಡಾಗ ಬುದ್ಧ ತುಸುವಾದರೂ ಪುಳಕಗೊಂಡನೆ ಎನ್ನುವುದು ನಮಗೆ ತಿಳಿಯದು. ಅದು ತಿಳಿಯುವುದು ಕೂಡ ಸಾಧ್ಯವಿಲ್ಲ. ಏಕೆಂದರೆ ಬುದ್ಧನನ್ನು ಬಿಟ್ಟರೆ ಬೇರಾರಿಗೂ ಅಲ್ಲಿ ಏನು ನಡೆಯಿತೆಂದು ಗೊತ್ತಿಲ್ಲ. ಬಹುಶಃ ಅವನಿಗೂ ಏನು ನಡೆಯಿತೆಂದು ಗೊತ್ತಿಲ್ಲದಿರಬಹುದು!

'ಕ್ಲಿಯೋಪಾತ್ರಳ ಅನುರಾಗದಲ್ಲಿ ಸೀಸರ್‌ನ ಸ್ಥಾನವನ್ನು ಆಂಟೋನಿ ಆಕ್ರಮಿಸಿದಾಗ ಕ್ಲಿಯೋಪಾತ್ರಾಗೆ ಏನನ್ನಿಸಿತು? ಯೇಸುವಿಗೂ ಸಹ ಅವನ ಮ್ಯಾಗ್ಡಲೀನ್ ಇದ್ದಳು. ತಮ್ಮ ಕಾಲದಲ್ಲಷ್ಟೇ ಅಲ್ಲದೆ, ಎಲ್ಲ ಕಾಲದಲ್ಲಿಯೂ ಜನರ ಮನಸ್ಸನ್ನು ಅತ್ಯಂತ ಪರಿಣಾಮಕಾರಿಯಾಗಿ ಪ್ರಭಾವಗೊಳಿಸಬಲ್ಲ ಈ ವ್ಯಕ್ತಿಗಳ ನಿಜವಾದ ಭಾವನೆಗಳು ಏನಿದ್ದವು ಎಂಬುದು ಇತಿಹಾಸಕ್ಕೆ ತಿಳಿಯದೇ ಉಳಿದುಬಿಡುತ್ತದಲ್ಲ!'



ಈ ಬಗೆಯ ಸುಂದರ, ಸೂಕ್ಷ್ಮ ಸತ್ಯಗಳನ್ನು ಹುಡುಕುತ್ತಿದ್ದ ಲೋಹಿಯಾ ಮಹತ್ವದ ಲೇಖಕರೂ ಆಗಿದ್ದರು. 'ಸತ್ಯ ಗೊತ್ತಾಗುವುದು ಒಂದು ಮಗ್ಗುಲಿನಿಂದ ಅಥವಾ ಒಂದು ಕೋನದಿಂದ... ಎಲ್ಲ ಸತ್ಯವೂ ಹುಟ್ಟುವುದು ಒಂದು ದೃಷ್ಟಿಯ ಎಳೆಯಿಂದ ಮತ್ತು ನೋಟದಿಂದ...' ಎಂಬುದನ್ನು ಲೋಹಿಯಾ ಕಂಡುಕೊಂಡರು. ಲೋಹಿಯಾ ಅಪರೂಪದ ರಾಜಕಾರಣಿಯಾಗಿದ್ದರ ಹಿಂದೆ ಅವರ ಲೇಖಕ ಸತ್ವವೂ ದೊಡ್ಡ ಮಟ್ಟದಲ್ಲಿ ಕೆಲಸ ಮಾಡಿದೆ.

ಲೇಖಕ ಲೋಹಿಯಾಗೆ ಇತಿಹಾಸಕ್ಕೆ ದಕ್ಕದೇ ಹೋದ ಗೌತಮನ ಒಳ ರಮ್ಯಲೋಕ ಹಾಗೂ ಲೋಕಕ್ಕೆ ಕಂಡಿರುವ ಅವನ ವ್ಯಕ್ತಿತ್ವ ಎರಡರ ಬಗೆಗೂ ಸಮಾನ ಆಸಕ್ತಿಯಿತ್ತು:

'ಮಾನವನ ಇತಿಹಾಸದಲ್ಲಿ ಗೌತಮ ಅತಿ ಶ್ರೇಷ್ಠ ವ್ಯಕ್ತಿ' ಎನ್ನುವ ಲೋಹಿಯಾ ಅದಕ್ಕೆ ಕಾರಣಗಳನ್ನೂ ಕೊಡುತ್ತಾರೆ:

'ಆಶೆ ಕುರಿತ ಬುದ್ಧನ ಸಿದ್ಧಾಂತ, ಆತ ಕೊಡುವ ಆಶೆಯ ಕಾರಣಗಳು, ಪ್ರಜ್ಞೆ ಕುರಿತ ಆತನ ಎಚ್ಚರ, ಒಂದರಿಂದ ಮತ್ತೊಂದು ಬೇರ್ಪಡುವುದನ್ನು ಕುರಿತ ಆತನ ತಿಳಿವಳಿಕೆ, ಆಶೆಯನ್ನು ಪೂಜಿಸುವ ಬಗೆಗಿನ ಆತನ ನೀತಿಸಂಹಿತೆ ಮತ್ತು ಕರುಣೆ ಮನುಷ್ಯನ ವಿಧಿಯನ್ನು ರೂಪಿಸುವಲ್ಲಿ ಶಾಶ್ವತ ಪ್ರಸ್ತುತತೆಯನ್ನು ಪಡೆದಿವೆ.'

ಒಮ್ಮೆ ರಮಾ ಜೊತೆಗಿನ ಪ್ರವಾಸದಲ್ಲಿ ಬುದ್ಧ, ಮಹಾವೀರರ ಶಿಲ್ಪಗಳ ವಿಶಿಷ್ಟ ಸತ್ಯಗಳನ್ನು ಲೋಹಿಯಾ ಅರಿತರು. ಎಂಟು ವರ್ಷಗಳ ನಂತರ 'ಮೀನಿಂಗ್ ಇನ್ ಸ್ಟೋನ್' ಎಂಬ ಮಹತ್ವಾಕಾಂಕ್ಷೆಯ ಪ್ರಬಂಧ ಬರೆದು ಮುಗಿಸಿದ ಲೋಹಿಯಾ ರಮಾಗೆ ಬರೆಯುತ್ತಾರೆ:

'ನೀನು ಈ ಲೇಖನ ಓದಿದಾಗ ಇಲ್ಲಿನ ಕೆಲವು ಅಂಶಗಳನ್ನು ನನಗೆ ಕಲಿಸಿದವಳು ನೀನೇ ಎಂಬುದು ನಿನಗೆ ಗೊತ್ತಾಗುತ್ತದೆ. ನೀನು ಸ್ಮಾರಕಗಳ ದಿನಾಂಕ, ಸ್ಥಳಗಳನ್ನು ಒದಗಿಸಿಕೊಟ್ಟ ಕತ್ತೆ ಕೆಲಸವನ್ನಷ್ಟೇ ನಾನಿಲ್ಲಿ ಸೂಚಿಸುತ್ತಿಲ್ಲ. ಬುದ್ಧನ ನಿರಾಳ ಭಂಗಿ, ಮಹಾವೀರನ ಉದ್ವಿಗ್ನ ಭಂಗಿ ಇವೆರಡನ್ನೂ ನಿನ್ನ ಕಣ್ಣು ನನಗೆ ತೋರಿಸದಿದ್ದರೆ ಅವು ನನಗೆ ಗೊತ್ತಾಗುತ್ತಲೇ ಇರಲಿಲ್ಲ. ನೀನು ಎಂಟು ವರ್ಷಗಳ ಕೆಳಗೆ ಹೇಳಿದ್ದನ್ನೇ ಮತ್ತೆ ಮತ್ತೆ ಯೋಚಿಸಿ, ಶ್ರಮವಹಿಸಿ ಕೆಲಸ ಮಾಡಿ ಈ ಐಡಿಯಾಗಳನ್ನು ಬೆಳೆಸಿರುವೆ. ಇದು ಮಹಾಪ್ರತಿಭೆಯ ಕೆಲಸವೋ, ಬುದ್ಧಿಯ ಫಲವೋ ಗೊತ್ತಿಲ್ಲ. ಆದರೆ ಅದಕ್ಕೇನಾದರೂ ಬೆಲೆಯಿದ್ದರೆ ಅದು ನಿನ್ನ ಕೆಲಸದ ಫಲ ಕೂಡ ಎಂಬುದು ನಿನಗೆ ತಿಳಿದಿರಲಿ.'

ಶಿಲ್ಪಗಳ ಮಹಾಪ್ರತಿಭೆಯನ್ನೂ, ಬುದ್ಧ, ಮಹಾವೀರರನ್ನೂ ಲೋಹಿಯಾ ಏಕಕಾಲಕ್ಕೆ ಕಣ್ತುಂಬಿಕೊಳ್ಳುತ್ತಾರೆ:

'ಬುದ್ಧ, ಮಹಾವೀರರು ನೋಡುವುದಕ್ಕೆ ಹೇಗಿದ್ದರೋ ತಿಳಿಯದು. ಆದರೆ ಅವರು ತೀರಿ ಹೋಗಿ ಮುನ್ನೂರು ವರ್ಷ ಅಥವಾ ಅದಕ್ಕೂ ಹೆಚ್ಚಿನ ವರ್ಷ ಆದ ಮೇಲೆ ಅವರ ಪ್ರತಿಮೆಗಳನ್ನು ಕೆತ್ತತೊಡಗಿದ ಶಿಲ್ಪಿ ಅವರು ಅವರವರ ಉಪದೇಶ ಸಾರಗಳಲ್ಲಿ ಜೀವಂತ ಕಾಣುವ ಹಾಗೆ ಮಾಡಿದ್ದಾನೆ. ಈ ಪ್ರತಿಮೆಗಳಲ್ಲಿ ಅನೇಕ ಭಂಗಿ–ಮುದ್ರೆಗಳು ಕಾಣುತ್ತವೆ: ಧ್ಯಾನಮುದ್ರೆ, ದ್ರವಿಸುವ ಕರುಣಮುದ್ರೆ, ಸಾಂತ್ವನ ಕೊಡುವ ಅಭಯಮುದ್ರೆ, ಇಂದ್ರಿಯಗಳನ್ನು ಜಯಿಸಿ ನಿಂತ ಗಂಭೀರಮುದ್ರೆ ಇತ್ಯಾದಿ.'

ಬುದ್ಧ, ಮಹಾವೀರರ ಭಂಗಿಗಳನ್ನು ನೋಡನೋಡುತ್ತಲೇ ಯುರೋಪಿನ ಕ್ರಿಸ್ತನ ಭಂಗಿಗಳು ಲೋಹಿಯಾ ಕಣ್ಣೆದುರು ಮೂಡುತ್ತವೆ. ಇಂಡಿಯಾದ ಶಿಲ್ಪಿಗಿದ್ದ ಸ್ವಾತಂತ್ರ್ಯ ಎಷ್ಟು ಅಪೂರ್ವವಾದುದೆಂಬುದು ಅವರಿಗೆ ಹೊಳೆಯುತ್ತದೆ:

'ಬೇರೆ ದೇಶಗಳಲ್ಲಿ ಶಿಲುಬೆಯ ಕ್ರಿಸ್ತನಂಥ ಏಕಮುದ್ರೆ ಅಲ್ಲಿನ ಶಿಲ್ಪಿಗಳ ಕೈ ಕಟ್ಟಿತು; ಆದರೆ ಇಂಡಿಯಾದ ಶಿಲ್ಪಿಗಳ ಸಂದರ್ಭದಲ್ಲಿ ಈ ಬಗೆಯ ಏಕಮುದ್ರೆ ಅವರ ಕೈ ಕಟ್ಟಲಿಲ್ಲ. ತನ್ನ ಮೂರ್ತಿಯನ್ನು ತನಗೆ ಬೇಕೆನ್ನುವ ಹಾಗೆ ರೂಪಿಸುವ ಸ್ವಾತಂತ್ರ್ಯ ಯುರೋಪಿನ ಚಿತ್ರಕಾರನಿಗೆ ದೊರಕಿತ್ತು; ಆ ಸ್ವಾತಂತ್ರ್ಯ ಯುರೋಪಿನ ಶಿಲ್ಪಿಗೆ ದೊರಕಲಿಲ್ಲ. ಆದರೆ ಅಂಥ ಸ್ವಾತಂತ್ರ್ಯ ಇಂಡಿಯಾದ ಶಿಲ್ಪಿಗಳಿಗೆ ಸಹಜವಾಗಿ ದೊರಕಿತು. ಹಾಗಿದ್ದರೂ ಈ ಎಲ್ಲ ವೈವಿಧ್ಯಗಳ ಹಿಂದೆ ಒಂದು ಏಕಸತ್ವ, ಏಕಶೈಲಿ ಕಾಣಿಸುತ್ತದೆ.

'ಎಂಥ ಮಹಾ ಕಲಾವಿದನಾಗಿದ್ದರೂ ಒಬ್ಬನಿಂದ ರೂಢಿಸಲು ಅಸಾಧ್ಯವಾದಂಥ, ಪೀಳಿಗೆಯ ನಂತರ ಪೀಳಿಗೆಯಾಗಿ ಸತತ ಶ್ರಮದಿಂದ ರೂಢಿಸಿಕೊಂಡು ಬಂದಂಥ ಸಮಗ್ರವಾದ ಏಕಶೈಲಿ ಇದು. ಆ ಕಾರಣದಿಂದ, ಯಾವ ಭಂಗಿ–ಮುದ್ರೆಗಳಲ್ಲಿದ್ದರೂ ಸರಿಯೆ, ಬುದ್ಧನೇ ಬೇರೆ, ಹಾಗೂ ಮಹಾವೀರನೇ ಬೇರೆಯಾಗಿ ಕಾಣುತ್ತಾರೆ; ಅದರಲ್ಲಿ ಯಾವುದೇ ಅನುಮಾನ, ಗೊಂದಲಗಳಿಗೆ ಅವಕಾಶವಿಲ್ಲ!

'ಬುದ್ಧ ವಿರಾಮಮೂರ್ತಿ, ಮಹಾವೀರನಲ್ಲಿ ಸಂಯಮದ ಕಡುಪು; ಮನುಷ್ಯನಿಗೆ ತೆರೆಯಬಹುದಾದ ಪರಮಸಿದ್ಧಿ ಇವರಿಗೆ ತೆರೆದಿದೆ ಎನ್ನುವ ಹಾಗೆ ಕಾಣುತ್ತದೆ. ಇಬ್ಬರೂ ತಾವು ಪಡೆದ ವಿಜಯಕ್ಕೆ ಸಾಕಾರರಾಗಿದ್ದಾರೆ. ನಂತರದಲ್ಲಿ ಈ ಮಹಾತ್ಮರ ಮೂಲ ಉಪದೇಶಗಳ ಬೃಹತ್ ಗ್ರಂಥಗಳು, ವ್ಯಾಖ್ಯೆಗಳು ವಿಪುಲವಾಗಿ ಹೊರಬಂದವು. ಆದರೂ ಅವುಗಳಿಗೆ ಯಾವುದಕ್ಕೂ ಅಷ್ಟು ಸಂಕ್ಷಿಪ್ತದಲ್ಲಿ, ಅಷ್ಟು ಸ್ಪಷ್ಟತೆಯಲ್ಲಿ ಹಿಡಿದುಕೊಡಲಾಗದ ಸಾರ ಸತ್ವವನ್ನು ಶಿಲ್ಪಿ ಆಯಾ ಮೂರ್ತಿಗಾತ್ರದಲ್ಲೇ ಸಾಕಾರಗೊಳಿಸಿ ಕೊಟ್ಟಿದ್ದಾನೆ.'

'ಇಲ್ಲಿ ಎಲ್ಲವೂ ಇತ್ತು' ಎನ್ನುವ ಬೊಗಳೆದಾಸರು, ಅಥವಾ 'ಇಲ್ಲಿ ಏನೂ ಇರಲಿಲ್ಲ' ಎನ್ನುವ ಸಿನಿಕರು ಈ ಇಬ್ಬರ ನಡುವೆ ಭಾರತದ ಶಿಲ್ಪಕಲೆಯ ಅಸಲಿ ದನಿಯನ್ನು, ಕಲೆ ಹೇಳುವ ಕತೆಗಳನ್ನು ಲೋಹಿಯಾರ ಅನನ್ಯ ಸಾಂಸ್ಕೃತಿಕ ಬರಹಗಳಲ್ಲಿ ನಾವು ಕೇಳಿಸಿಕೊಳ್ಳಬಹುದು; ಶಿಲ್ಪಗಳ ಅಗೋಚರ ಸೌಂದರ್ಯವನ್ನು ಕಣ್ತುಂಬಿಕೊಳ್ಳಬಹುದು!

ಒಮ್ಮೆ ಲೋಹಿಯಾ ಗೆಳತಿ ರಮಾ ಮಿತ್ರರನ್ನು